# ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ವಿಳಾಸ: "ವನವಿಕಾಸ", 1ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-560 003 ದೂ : 080-23319935


## 23 ಸಹಾಯಕ ನೆಡುತೋಪು ಅಧೀಕ್ಷಕ ಹಾಗೂ
## 22 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ 2016-17

ಅಧಿಸೂಚನೆ ಸಂಖ್ಯೆ: ಕಅಅನಿನಿ/ಎ1/ನೇನ/2016-17/236 ದಿನಾಂಕ 03.05.2016 ಹಾಗೂ
ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಕಅಅನಿನಿ/ಎ1(ಬಿ)/ನೇ.ನ/2017-18/2006 ದಿನಾಂಕ 15.12.2017

## ಪ್ರಕಟಣೆ

ಈ ಕಛೇರಿಯ ದಿನಾಂಕ 16.08.2021ರ ಪ್ರಕಟಣೆಯನ್ನು ಮುಂದುವರೆಸುತ್ತಾ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಲ್ಲಿ 23 ಸಹಾಯಕ ನೆಡುತೋಪು ಅಧೀಕ್ಷಕ ಹಾಗೂ 22 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ದಿನಾಂಕ 03.10.2021ರಂದು ಅರಣ್ಯ ರಕ್ಷಕ ಮತ್ತು ಸಹಾಯಕ ನೆಡುತೋಪು ಅಧೀಕ್ಷಕ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ಈಗಾಗಲೇ ನಡೆಸಲು ನಿರ್ಧರಿಸಲಾದ ದಿನಾಂಕದಂದೇ ನಡೆಯಲಿರುವುದರಿಂದ, ಲಿಖಿತ ಪರೀಕ್ಷೆಯ ದಿನಾಂಕ ಮತ್ತು ಸಮಯದಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಈ ಮೂಲಕ ಸ್ಪಷ್ಟ ಪಡಿಸಲಾಗಿದೆ.

ಆದುದರಿಂದ ಧಾರವಾಡ ವೃತ್ತದಲ್ಲಿ ದಿನಾಂಕ 03.10.2021ರಂದು ಪೂರ್ವಾಹ್ನ 10.00 ರಿಂದ 12.00ರ ವರೆಗೆ ಅರಣ್ಯ ರಕ್ಷಕ ಹಾಗೂ ಅಪರಾಹ್ನ 2.00 ರಿಂದ 5.00ರ ವರೆಗೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುವುದು.

ಸರ್ಕಾರವು ನಿಗಧಿಪಡಿಸಿರುವ ಯಾವುದಾದರೂ ಅಧಿಕೃತ ಗುರುತಿನ ಚೀಟಿ ಮತ್ತು ಪ್ರವೇಶ ಪತ್ರದೊಂದಿಗೆ ನಿಗಧಿತ ದಿನಾಂಕದಂದು ಲಿಖಿತ ಪರೀಕ್ಷೆಗೆ ಖುದ್ದು ಹಾಜರಾಗತಕ್ಕದ್ದು. ಲಿಖಿತ ಪರೀಕ್ಷೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು ಹಾಗೂ ಯಾವುದೇ ಕಾರಣಕ್ಕೂ ಯಾವುದೇ ಸನ್ನಿವೇಶದಲ್ಲೂ ಸಮಯಾವಕಾಶವನ್ನು ವಿಸ್ತೀರ್ಣ ನೀಡಲಾಗುವುದಿಲ್ಲ. ನಿಗಮದ ವತಿಯಿಂದ ಯಾವುದೇ ರೀತಿಯ ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : 01.10.2021